ದಿನಾಂಕಃ15-12-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿ ಪರ ಶ್ರೀ.ಎಂ.ಎ ವಕೀಲರಿಂದ ಎನ್.ಎನ್.ಆರ್ ವಕೀಲರ ಪರವಾಗಿ ಃ-**

ನನ್ನ ತಂದೆ ಹೆಸರು ಹನುಮಂತರೆಡ್ಡಿ. ನನ್ನ ತಾಯಿಯ ಹೆಸರು ವೆಂಕಟಮ್ಮ. ನನ್ನ ತಂದೆಗೆ 4 ಜನ ಹೆಣ್ಣು ಮಕ್ಕಳು ಅವರ ಪೈಕಿ ಒಬ್ಬರು ಮೃತ ಪಟ್ಟಿರುತ್ತಾರೆ. ಇಬ್ಬರೂ ಗಂಡು ಮಕ್ಕಳು. ನನ್ನ ಮದುವೆ ದಿನಾಂಕ 21-05-1983 ರಂದು ನಡೆದಿರುತ್ತದೆ. ಮದುವೆಯು ನಮ್ಮ ಮನೆಯ ಬಳಿ ನಡೆದಿರುತ್ತದೆ. ನಮ್ಮ ಮದುವೆಯು ಸಾಧಾರಣವಾಗಿ ನಡೆದಿರುತ್ತದೆ. ಮದುವೆಯ ಸಮಯದಲ್ಲಿ ನನಗೆ 4 ರಿಂದ 5 ತೊಲೆ ಚಿನ್ನದ ಒಡವೆಗಳನ್ನು ಕೊಟ್ಟಿದ್ದರು. ನನ್ನ ಗಂಡನಿಗೆ ವರದಕ್ಷಿಣೆ ಕೊಟ್ಟಿರುವುದಿಲ್ಲ. ನಾನು ನನ್ನ ಗಂಡನ ಜೊತೆ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ತಂಗಿ ರತ್ನಮ್ಮ ರವರ ಮದುವೆಯನ್ನು ಸಹ ನನ್ನ ತಂದೆಯವರೇ ಮಾಡಿಕೊಟ್ಟಿದ್ದರು ಎಂದರೆ ಸರಿ. ಅವರ ಮದುವೆ ಸಹ ಸಾಧಾರಣವಾಗಿ ಮಾಡಿರುತ್ತಾರೆ. ನನ್ನ ತಂಗಿಗೂ ಸಹ 5 ತೊಲೆ ಚಿನ್ನದ ಒಡವೆಗಳನ್ನು ಕೊಟ್ಟಿರುತ್ತಾರೆ. ನನ್ನ ತಂಗಿ ಸಹ ಗಂಡ ಊರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ, ತವರ ಮನೆಯಲ್ಲಿ ವಾಸವಿದ್ದಾರೆ. ನನ್ನ ತಂಗಿ ರಾಮಾಂಜಿನಮ್ಮ ರವರ ಮದುವೆ ಧರ್ಮಸ್ಥಳದಲ್ಲಿ ಆಗಿರುತ್ತದೆ. ಅವರಿಗೂ 5 ತೊಲೆ ಚಿನ್ನದ ಒಡವೆಗಳನ್ನು ಕೊಟ್ಟಿರುತ್ತಾರೆ. ನಮ್ಮ ಮದುವೆ ಮಾಡಲು ಮತ್ತು ಒಡವೆಗಳನ್ನು ಕೊಡಲು ನನ್ನ ತಂದೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

(ವಕೀಲರ ಸಮಯ ಕೋರಿದ ಮೇರೆಗೆ ಮುಂದಿನ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾವಗಡ